(ಪ್ರಾಸಾ-1) ಪ್ರಮಾಣವಚನ ಬೋಧಿಸಿದ ದಿನಾಂಕಃ 13-08-2021
ಮುಂದುವರೆದ ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದ

12. ಲೋ.ಪೊಲೀಸ ಠಾಣೆಯಲ್ಲಿ ನಾನು ರೂ.1000/- ಮುಖ ಬೆಲೆಯ 25 ನೋಟುಗಳನ್ನು ತೆಗೆದುಕೊಟ್ಟಾಗ ಪಂಚರಾದ ಚಾಸಾ-3 ಬಾಬುರಾವ ಆ ಹಣವನ್ನು ಎಣಿಸಿದರು ಚಾಸಾ-2 ಸಂಜೀವ ಕುಮಾರ ನೋಟಿನ ಮುಖ ಬೆಲೆ ಮತ್ತು ನಂಬರಗಳನ್ನು ಬರೆದುಕೊಂಡರು. ಸದರಿ ದಾಖಲೆಯನ್ನು ನೋಡಿ ಗುರುತು ಮಾಡಿದ್ದು ಈಗ ನಿಪಿ-23 ಅಂತಾ ಗುರುತುಮಾಡಲಾಯಿತು. ಸದರಿ ದಾಖಲೆಗೆ ಪಂಚರು ಸಹಿ ಮಾಡಿದಾರೆ. ನನ್ನ ಸಹಿ ಇಲ್ಲಾ.

13. ಸಾಕ್ಷಿ ಕೋರ್ಟಿನ ಮುಂದೆ ಹಣ ವಹಿಸಿಕೊಡುವ ಪಂಚನಾಮೆ ಮತ್ತು ತಮ್ಮ ಸಹಿ ನೋಡಿ ಗುರುತುಮಾಡಿದ್ದು, ಸದರಿ ದಾಖಲೆಯನ್ನು ಈಗ ನಿಪಿ-2 ಅಂತಾ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಅಂತಾ ಗುರುತುಮಾಡಲಾಯಿತು. ಹಣ ವಹಿಸಿಕೊಡುವ ಪಂಚನಾಮೆ ಕಾಲಕ್ಕೆ ಫೋಟೋ ತೆಗೆದಿದ್ದಾರೆ. ಸಾಕ್ಷಿ ಸದರಿ ಫೋಟೋಗಳನ್ನು ನೋಡಿ ಗುರುತು ಮಾಡಿದ್ದು ಅವುಗಳನ್ನು ಈಗ ಕ್ರಮವಾಗಿ ನಿಪಿ-3 ರಿಂದ 22 ಅಂತಾ ಗುರುತುಮಾಡಲಾಯಿತು.

14. ನಾನು ಮತ್ತು 2ನೇ ಆರೋಪಿ ಸಿದ್ದಯ್ಯಸ್ವಾಮಿ ಮಾತನಾಡಿದ್ದನ್ನ ಮೊಬೈಲ್‌ನ ವೈಸ್ ರಿಕಾರ್ಡನಲ್ಲಿ ದಾಖಲಾಗಿದ್ದು ಅದನ್ನ ಲೋ. ಕಚೇರಿಯಲ್ಲಿ ಲ್ಯಾಪಟಾಪ್ ಮುಖಾಂತರ ಸಿಡಿ ಗೆ ವರ್ಗಾಯಿಸಿ ಮತ್ತು ಈ ಬಗ್ಗೆ ಬರವಣಿಗೆ ಮಾಡಿಕೊಂಡಿದ್ದಾರೆ. ಆ ರೀತಿ ವರ್ಗಾವಣೆ ಮಾಡಿದಂತ ಸಿಡಿಯನ್ನು ನಾನು ನೋಡಿದರೆ ಗುರುತುಮಾಡುತ್ತೇನೆ. ಸಾಕ್ಷಿ ಕೋರ್ಟಿನ ಮುಂದೆ ಸಂಭಾಷಣೆಯನ್ನು ಲಿಖಿತ ಮೂಲಕ ಬರೆದ ದಾಖಲೆ ಗುರುತು ಮಾಡಿದ್ದಾರೆ. ಅದಕ್ಕೆ ನಾನು ಸಹಿ ಮಾಡಿಲ್ಲಾ. ಸದರಿ ದಾಖಲೆಗೆ ಪಂಚರು ಮತ್ತು ತನಿಖಾಧಿಕಾರಿ ಸಹಿ ಮಾಡಿದ್ದಾರೆ ಸದರಿ ದಾಖಲೆಯನ್ನು ಈಗ ನಿಪಿ-24 ಅಂತಾ ಗುರುತುಮಾಡಲಾಯಿತು.

15. ಹಣ ವಹಿಸಿಕೊಡುವ ಪಂಚನಾಮೆ ಪ್ರಕ್ರಿಯೇ ಲೋ.ಕಚೇರಿಯಲ್ಲಿ ಮುಂದ ನಂತರ ಮದ್ಯಾಹ್ನ 3.00 ಗಂಟೆಗೆ ನಾನು ಮತ್ತು ನೆರಳು ಸಾಕ್ಷಿ ಚಾಸಾ-2 ಸಂಜೀವ ಯಾದಗಿರಿಯ ಎ.ಸಿ ಕಚೇರಿಗೆ

ಹೋರಟಿದ್ದೇವೆ. ನಮ್ಮ ಹಿಂದೆ ಪಿಎಸ್‌ಐ ಮತ್ತು ಲೋ.ಸಿಬ್ಬಂದಿ ಮತ್ತು ಇನ್ನೊಬ್ಬ ಪಂಚ ಲೋ.ಕಚೇರಿಯಿಂದ ತಮ್ಮ ವಾಹನದಲ್ಲಿ ಹೊರಟಿದ್ದಾರೆ.

16. ನಂತರ ನಾನು ಮತ್ತು ನೆರಳು ಸಾಕ್ಷಿ ಚಾಸಾ-2 ಸಂಜೀವ ಇಬ್ಬರು ಕೂಡಾ ಎ.ಸಿ ಕಚೇರಿಯ ಮ್ಯಾನೇಜರ 1ನೇ ಆರೋಪಿ ಗುರುಪಾದಪ್ಪ ಇವರ ಹತ್ತಿರ ಹೋಗಿದ್ದೇವೆ. ನನ್ನ ಎನ್.ಎ ಜಮೀನಿನ ಬಗ್ಗೆ 1ನೇ ಆರೋಪಿತನನ್ನು ವಿಚಾರ ಮಾಡಿದ್ದೇನೆ. 15 ನಿಮಿಷ ಬಿಟ್ಟು ತಿಳಿಸುತ್ತೇನೆ ಅಂತಾ ನನಗೆ ತಿಳಿಸಿದ್ದಾರೆ. ನಂತರ ಸದರಿ ವಿಚಾರವನ್ನು ಹೊರಗೆ ಕಾಯುತ್ತಿದ್ದಂತ ಲೋ.ಸಿಬ್ಬಂದಿಗೆ ತಿಳಿಸಿದ್ದೇವೆ. ಲೋ.ಪೋಲೀಸರು 2ನೇ ಆರೋಣಪಿ ಸಿದ್ದಯ್ಯ ಇವರಿಗೆ ಫೋನ್ ಮಾಡಿ ಫೈಲ್ ಬಗ್ಗೆ ಕೇಳಿದ್ದೇವೆ. ಆಗ 2ನೇ ಆರೋಪಿ ನಾನು 1ನೇ ಆರೋಪಿ ಗುರುಪಾದಪ್ಪನಿಗೆ ಹೇಳಿದ್ದೇನೆ ಹಣ ಕೊಟ್ಟು ಹೋಗಿ ಅಂತಾ ತಿಳಿಸಿದ್ದಾರೆ.

17. ಅರ್ಧ ತಾಸು ಬಿಟ್ಟು ನಾವು ಪುನಃ ಎ.ಸಿ ಕಚೇರಿ ಒಳಗೆ ಹೋಗಿದ್ದೇವೆ. 1ನೇ ಆರೋಪಿ ನನಗೆ ಡಿ.ಸಿ ಕಚೇರಿಯಿಂದ ಫೈಲ್ ತರಿಸಿಸುತ್ತೇನೆ, ನಾನು ಫೈಲ್ ಇನ್ನು ನೋಡಿಲ್ಲ ಫೈಲ್ ನೋಡಿದ ನಂತರ ಮತ್ತು ಚೆಕ್ಕುಬಂದಿ ನೋಡಿದ ನಂತರ ನಿಮಗೆ 2-3 ದಿನಗಳು ಬಿಟ್ಟು ತಿಳಿಸುತ್ತೇನೆ ಅಂತಾ ಹೇಳಿದ್ದಾರೆ. ಫೈಲ್ ಮತ್ತು ದುಡ್ಡಿನ ವಿಚಾರದ ಬಗ್ಗೆ ನಂತರ ಮಾತನಾಡುತ್ತೇನೆ 1ನೇ ಆರೋಪಿ ಗುರುಪಾದಪ್ಪ ತಿಳಿಸಿದ್ದಾರೆ. ನಾವು ಪುನಃ ಹೊರಕ್ಕೆ ಬಂದು ಲೋ.ಪೋಲೀಸರಿಗೆ ತಿಳಿಸಿದ್ದೇವೆ. ಪುನಃ ನಮ್ಮನ್ನು ಲೋ.ಕಚೇರಿಗೆ ಕರೆದುಕೊಂಡು ಹೋದರು.

18. ಲೋ.ಕಚೇರಿಯಲ್ಲಿ ಫಿನಾಪ್ತಲಿನ ಪೌಡರ ಹಚ್ಚಿದ ಹಣವನ್ನು ಪರಿಶೀಲಿನೆ ಮಾಡಿದರು ಅದೇ ಹಣವನ್ನು ನಮಗೆ ವಾಪಸ್ಸು ಕೊಟ್ಟಿದ್ದಾರೆ. ಪುನಃ ಆರೋಪಿತರು ಫೋನ್ ಮಾಡಿದರೆ ನಮಗೆ ತಿಳಿಸಬೇಕು ಅಂತಾ ಹೇಳಿದ್ದಾರೆ. ದಿಃ30.10.10 ಸಾಃ 5.00 ರಿಂದ 6.00 ವರೆಗೆ ಈ ಬಗ್ಗೆ ಪಂಚನಾಮೆ ಮಾಡಿದ್ದಾರೆ. ಸಾಕ್ಷಿ ಪಂಚನಾಮೆ ಮತ್ತು ತಮ್ಮ ಸಹಿ ನೋಡಿ ಗುರುತು ಮಾಡಿದ್ದು ಸದರಿ ಪಂಚನಾಮೆಯನ್ನು ನಿಪಿ-25 ಅಂತಾ ಸಾಕ್ಷಿಯ ಸಹಿಯನ್ನು ನಿಪಿ-25(ಎ) ಅಂತಾ ಗುರುತುಮಾಡಲಾಯಿತು.

(ಪ್ರಾಸಾ-1)

ನೋಟ್‌ಃ ಸಾಕ್ಷಿಗೆ ದಾಖಲಾತಿಗಳನ್ನು ಸರಿಯಾಗಿ ಪರಿಶೀಲನೆ ಮಾಡಿ ತಮ್ಮ ಹೇಳಿಕೆಗಳನ್ನು ಪರಿಶೀಲನೆ ಮಾಡಿ ಸಾಕ್ಷ್ಯಾ ಕೊಡುವಂತೆ ಸೂಚನೆ ಕೊಡಲಾಯಿತು. ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ ಹೇ ಕೇ ಸರಿ ಇದೆ.

ವಿಶೇಷ ಮತ್ತು ಸತ್ರ ನ್ಯಾಯಾಧೀಶರು,
ಯಾದಗಿರಿ.

This document was created with the Win2PDF “print to PDF” printer available at
http://www.win2pdf.com

This version of Win2PDF 10 is for evaluation and non-commercial use only.

This page will not be added after purchasing Win2PDF.

http://www.win2pdf.com/purchase/